## 5. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ವಿಠ್ಠಲನಗರ, ತೀರ್ಥಹಳ್ಳಿ ತಾಲ್ಲೂಕು.

**ಹಿನ್ನೆಲೆ :-** ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ವಿಠ್ಠಲನಗರ ಇದು ತೀರ್ಥಹಳ್ಳಿ ಪಟ್ಟಣಕ್ಕೆ ಹೊಂದಿಕೊಂಡಿದ್ದು, ಸುಮಾರು 2 ಕಿ ಮೀ ದೂರದಲ್ಲಿದೆ.ಉಡುಪಿ ಪುತ್ತಿಗೆ ಮಠದ ಸಮೀಪದಲ್ಲಿ ಈ ಊರು ತಲೆ ಎತ್ತಿರುವುದರಿಂದ ಶ್ರೀ ಕೃಷ್ಣನ ನೆಲೆವೀಡೆಂದೂ ವಿಠ್ಠಲನ ಸನ್ನಿಧಿ ಊರು,,,'ವಿಠ್ಠಲನಗರ'ವಾಗಿದೆ.

**ಸವಾಲುಗಳು:-**

- ಶಾಲಾ ಪರಿಸರದಲ್ಲಿ ವಾಸಿಸುವ ಜನ ಆರ್ಥಿಕವಾಗಿ ಹಿಂದುಳಿದಿದ್ದು,ಅತೀ ಹಿಂದುಳಿದ ಜನಾಂಗದ ಕುಟುಂಬಗಳಾಗಿವೆ.
- ಪಟ್ಟಣಕ್ಕೆ ಹೊಂದಿಕೊಂಡಿರುವುದರಿಂದ ಮಧ್ಯಮವರ್ಗ ಹಾಗು ಶ್ರೀಮಂತ ಕುಟುಂಬದ ಮಕ್ಕಳು ಖಾಸಗಿ ಶಾಲಾ ವ್ಯಾಮೋಹದಿಂದ ಪಟ್ಟಣಕ್ಕೆ ಹೋಗುತ್ತಿರುವುದು.
- ಶಾಲಾ ಮಕ್ಕಳ ಪೋಷಕರಿಗೆ ಶಿಕ್ಷಣದ ಕುರಿತು ಅರಿವಿಲ್ಲದಿರುವುದು.
- ಸರ್ಕಾರಿ ಶಾಲೆ ಕುರಿತು ತಾತ್ಸಾರ ಮನೋಭಾವನೆ.

ಮೇಲಿನ ಸವಾಲುಗಳಿಗೆ ನಮ್ಮ ಕಾರ್ಯವೈಖರಿ, ಸಮುದಾಯವನ್ನು ನಮ್ಮೊಂದಿಗೆ ಬೆಸೆಯುವ ಪ್ರಯತ್ನವೇ ಉತ್ತರವಾಗಿದೆ.

### ಶಾಲಾ ಕಾಂಪೌಂಡ್ ಮತ್ತು ತೆರೆದ ರಂಗಮಂದಿರ






ಗ್ರಾಮ ಪಂಚಾಯತಿ ಮೇಲಿನಕುರುವಳ್ಳಿಯಿಂದ ಸುಮಾರು 6 ಲಕ್ಷ ರೂಪಾಯಿಗಳ ಅನುದಾನದಲ್ಲಿ ಶಾಲೆಯ ಸುತ್ತ ಕಾಂಪೌಂಡ್ ನಿರ್ಮಾಣಗೊಂಡಿರುತ್ತದೆ. ಶಾಲಾ ಮುಂಭಾಗಕ್ಕೆ ಕಬ್ಬಿಣದ ಗೇಟ್ ಇದ್ದು,ಸುರಕ್ಷಿತವಾಗಿದೆ. ಹಾಗು ಗ್ರಾಮ ಪಂಚಾಯತಿಯಿಂದ 50,000/- ರೂಪಾಯಿ ಅನುದಾನದಲ್ಲಿ ತೆರೆದ ರಂಗಮಂದಿರ ನಿರ್ಮಿಸಲಾಗಿದೆ.

**ಶಾಲಾವರಣ:-** ಶಾಲಾ ಕಟ್ಟಡದ ಸುತ್ತ ಅಂದಾಜು ಒಂದು ಎಕರೆಯಷ್ಟು ಭೂಮಿಯಿದೆ. ಶಾಲೆಯ ಮುಂಭಾಗದಲ್ಲಿ ಸುಂದರವಾದ ಹೂದೋಟ ನಿರ್ಮಿಸಲಾಗಿದೆ. ಹೂತೋಟದಲ್ಲಿ ನೂರಾರು ಜಾತಿಯ ಬಣ್ಣದ-ಬಣ್ಣದ ಹೂವಿದು, ಮಕ್ಕಳ ಕಲಿಕೆಗೆ ಸಸ್ಯಪ್ರಭೇಧ, ಎಲೆಗಳು, ಬಣ್ಣಗಳ ಪರಿಕಲ್ಪನೆ, ಹೂಗಳಲ್ಲಿ ವೈವಿಧ್ಯತೆ ಇತ್ಯಾದಿ ಅರಿಯಲು ಮಕ್ಕಳಿಗೆ ಸಹಕಾರಿಯಾಗಿದೆ. ಪೋಷಕರ ಸಹಕಾರದಿಂದ ಸುಮಾರು 4,000 ರೂಪಾಯಿ ವೆಚ್ಚದಲ್ಲಿ ಜೆಟ್ ಅಳವಡಿಸಲಾಗಿದೆ. ಹಂತ-ಹಂತವಾಗಿ ಅಭಿವೃದ್ಧಿಗೊಂಡು ಶಾಲಾವನದ ಮಧ್ಯೆ ದಾನಿಗಳ ನೆರವಿನಿಂದ 25,000 ರೂಪಾಯಿ ಮೌಲ್ಯದ ಹಾಸುಗಲ್ಲು ಪಡೆದು 'ಪಾತ್' ನಿರ್ಮಿಸಲಾಗಿದೆ. ಇಟ್ಟಿಗೆ ಜೋಡಣೆ, ಕೂಲಿ ಮೊದಲಾಗಿ ಈ ಕಾರ್ಯ ಪೂರ್ಣಗೊಳ್ಳಲು ಅಂದಾಜು 8000 ರೂಪಾಯಿ ತಗುಲಿದ್ದು ಶಾಲಾವನ ಇಂದು ಮಕ್ಕಳ ಸುಂದರ ಹೂತೋಟವಾಗಿ ಬದಲಾಗಿದೆ.

**ಪಾಟ್/ಹೂದಾನಿಗಳು** ಪ್ರತೀ ವರ್ಷ ಮಕ್ಕಳ ಹುಟ್ಟು ಹಬ್ಬ ಆಚರಿಸುವಾಗ, ಮಕ್ಕಳಿಂದ ಒಂದು ಹೂ-ದಾನಿ ಶಾಲೆಗೆ ಕೊಡುಗೆಯಾಗಿ ಪಡೆಯುತ್ತಿದ್ದು, ಆ ದಿನ ಅದೇ ಮಗುವಿನಿಂದ ಒಂದು ಗಿಡವನ್ನು ನೆಡುವ ಕಾರ್ಯ ಹಮ್ಮಿಕೊಳ್ಳಲಾಗಿದೆ. ಪ್ರತೀ ಹೂದಾನಿಯಲ್ಲಿ ಅರಳಿ ನಿಂತ ಅಂದದ ಪುಷ್ಪಗಳನ್ನು ಮಗು ನೋಡಿ ಆನಂದಿಸುವ ಸಂಭ್ರಮ-ಶಾಲಾ ಪರಿಸರದಲ್ಲಾದ ಬದಲಾವಣೆಯ ಕುರಿತು ನಾವೇ ಹೆಮ್ಮೆ ಪಡುವಂತೆನಿಸುತ್ತದೆ. ಇದುವರೆಗೆ ಶಾಲೆಗೆ ಸುಮಾರು 30 ಹೂದಾನಿ ಪಡೆದಿದ್ದು, ಅಂದಾಜು 5000 ರೂಪಾಯಿ ಮೌಲ್ಯದ ಹೂದಾನಿಗಳು ಶಾಲಾ




ಆಸ್ತಿಗೆ ಸೇರ್ಪಡೆಯಾಗಿವೆ.

## ಹಣ್ಣಿನ ಗಿಡಗಳು

ಶಾಲಾವರಣದ ಹಿಂಭಾಗದಲ್ಲಿ ಪ್ರತೀ ವರ್ಷವೂ ಅರಣ್ಯ ಇಲಾಖೆ,ಗ್ರಾಮ ಪಂಚಾಯಿತಿ,ಯುವ ಬ್ರಿಗೇಡ್ ಇತ್ಯಾದಿ ಇಲಾಖೆ ಮತ್ತು ಸಂಸ್ಥೆಯೊಂದಿಗೆ ವನಮಹೋತ್ಸವ ಕಾರ್ಯಕ್ರಮ ನಡೆಸುತ್ತ ಬಂದಿದ್ದು,ವಿವಿಧ ಜಾತಿಯ ಹಣ್ಣಿನ ಗಿಡಗಳನ್ನು ನೆಟ್ಟು ಪೋಷಿಸಲಾಗುತ್ತಿದೆ. ನೇರಳೆ, ಪೇರಳೆ, ಮಾವು, ಹಲಸು, ನೆಲ್ಲಿ ಅಮಟೆ ಬಾಳೆ ತೆಂಗು ಮೊದಲ್ಗೊಂಡು ಸುಮಾರು 70-80 ಗಿಡಗಳು ಅಭಿವೃದ್ಧಿಗೊಳ್ಳುತ್ತಿದೆ.

## ಶಾಲಾ ಕಟ್ಟಡ






ಶಾಲೆಯಲ್ಲಿ ಮೂರು ಕೊಠಡಿಗಳು,ಚಿಕ್ಕದಾದ ಒಂದು ಕಚೇರಿ,ಒಂದು ಸ್ಟೋರ್ ರೂಮ್ ,ಒಂದು ಅಡುಗೆಕೋಣೆ ಹಾಗು ಒಂದು ದಾಸ್ತಾನು ಕೊಠಡಿ ಇದ್ದು, ಗೋಡೆ ಬರಹ ಅಗತ್ಯಕ್ಕೆ ತಕ್ಕಷ್ಟು ಮಾಡಲಾಗಿದೆ.

ಎರಡು ಕೊಠಡಿಗಳಿಗೆ ಆರ್.ಸಿ.ಸಿ ಮೇಲ್ಛಾವಣಿ ಇದ್ದು ಎರಡು ಕಟ್ಟಡದ ಮಧ್ಯದ ಜಾಗನ್ನು ಹೊಂದಿಸಿ, ದಾನಿಗಳ ನೆರವಿನಿಂದ ಕಚೇರಿ ಕೊಠಡಿ ಮಾಡಿಸಿರುವುದು ವಿಶೇಷವಾಗಿದೆ.







1998 ರಲ್ಲಿ ಶಾಲೆ ಪ್ರಾರಂಭವಾದ ಒಂದು ಕೋಣೆ ಮೇಲ್ಛಾವಣಿ ದುರಸ್ಥಿ ಹಂತ ತಲುಪಿ 4 ವರ್ಷಗಳಾದರೂ ಯಾವುದೇ ಅನುದಾನ ದೊರೆಯಲಿಲ್ಲ. ಜನಪ್ರತಿನಿಧಿಗಳಿಗೆ ಬೇಡಿಕೆ ನೀಡಿರುವುದರ ಫಲವಾಗಿ ಮುರಿದು ಬೀಳುವ ಸ್ಥಿತಿಯಲ್ಲಿದ್ದ ಒಂದು ಕೊಠಡಿಯ ಮೇಲ್ಛಾವಣಿಯನ್ನು 2018-19 ರಲ್ಲಿ ಮಾನ್ಯ ಶಾಸಕರಾದಶ್ರೀ ಆರಗ ಜ್ಞಾನೇಂದ್ರರವರು ತಮ್ಮ ಶಾಸಕರ ಅನುದಾನದಲ್ಲಿ 2 ಲಕ್ಷ ರೂಪಾಯಿ ನೀಡಿ ರಿಪೇರಿ ಮಾಡಿಸಿದರು.

**ಕಲಿಕಾ ಕೊಠಡಿ :** ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆಯಲ್ಲಿ ನಲಿ-ಕಲಿ ಕೊಠಡಿಗೆ ಹೊಸ ರೂಪ ನೀಡುವ ಪ್ರಯತ್ನ ಮಾಡಲಾಯಿತು. ಎಸ್.ಡಿ.ಎಂ.ಸಿ, ಶಿಕ್ಷಕರು, ವಿದ್ಯಾರ್ಥಿಗಳ ಸತತ 10-15 ದಿನಗಳ ಶ್ರಮದಾನದಿಂದ ಗೋಡೆಗೆ ಸುಣ್ಣ, ನಲಿಕಲಿ ತಟ್ಟೆಗೆ ಆಕರ್ಷಕ ಚಿತ್ರಗಳು. ವಾಲ್‌ಸ್ಲೇಟ್ ಬರೆದು ಅಂದ 'ಗೊಳಿಸಲಾಯಿತು. ಕಳೆದ ಸಾಲಿನ ಮಳೆಗಾಲದ ಅಧಿಕ ಮಳೆ ರಜೆಯಲ್ಲಿ-ನಮ್ಮ ಪರಿವಾರದ ಈ ಶ್ರಮದಾನ ವಿಶೇಷವಾಗಿತ್ತು. ಡಯಟ್ ಶಿವಮೊಗ್ಗದಲ್ಲಿ ಪ್ರತೀ ತಿಂಗಳು ಹಾಕುವ

ಫ್ಲೆಕ್ಸ್‌ನಲ್ಲಿ ನಮ್ಮ ಶಾಲೆಯ ನಲಿಕಲಿಯ ಒಂದು ಛಾಯಾಚಿತ್ರ ಅನಾವರಣಗೊಂಡಿದ್ದು,……

**"ನಮ್ಮ ಶಾಲೆ ನಮ್ಮ ಹೆಮ್ಮೆ"**







ಮಾರ್ಚ-ಏಪ್ರಿಲ್-2018 ರ ಸಂಹಿತೆ ಸಂಚಿಕೆಯಲ್ಲಿ ನಮ್ಮ ಶಾಲೆಯ 'ಶಾಲಾವನ'ದ ಭಾವಚಿತ್ರಪ್ರಕಟವಾದುದು ಮತ್ತೊಂದು ಹೆಗ್ಗಳಿಕೆ.


**ಕಲಿಕೋಪಕರಣ**










ನಲಿ-ಕಲಿ ಕೊಠಡಿಯಲ್ಲಿ ಮೈಲಿಗಲ್ಲುವಾರು, ಕಲಿಕೋಪಕರಣ ಜೋಡಿಸಿ, ನಲಿ-ಕಲಿ ಮಾದರಿಯಲ್ಲಿಯೇ ಅನುಕೂಲಿಸುವ ಕಾರ್ಯ ಮಾಡಲಾಗುತ್ತಿದೆ. 4 ಮತ್ತು 5ನೇ ತರಗತಿಗಳಿಗೂ ಪಾಠೋಪಕರಣಗಳನ್ನು ಜೋಡಿಸಿ ಬಳಕೆ ಮಾಡಲಾಗುತ್ತಿದೆ.

## ಆಟೋಪಕರಣ-ಪೀಠೋಪಕರಣ-ಆಟದ ಮೈದಾನ




ಚೆಸ್, ಕೇರಂ, ಹಾವು-ಏಣಿ, ಶೆಟಲ್, ಥ್ರೋಬಾಲ್, ರಿಂಗ್, ಸ್ಕಿಪಿಂಗ್ ಇತ್ಯಾದಿ ಆಟದ ಸಾಮಗ್ರಿಗಳನ್ನು ಮಕ್ಕಳು ಕೈಗೆಟುಕುವಂತೆ ಜೋಡಿಸಿ ಬಳಲಾಗುತ್ತಿದೆ. ಶಾಲಾ ಮಂತ್ರಿ ಮಂಡಲದ ಮೂಲಕ ನಿರ್ವಹಣಾ ಕಾರ್ಯ ನಡೆಯುತ್ತಿದೆ.ಮಕ್ಕಳಿಗೆ ಆಟವಾಡಲು ಅರ್ಧ ಎಕರೆ ಆಟದ ಮೈದಾನವಿದೆ. ಗ್ರಾಮಸ್ಥರ ನೆರವಿನಿಂದ ಶಾಲೆಗೆ ಅಗತ್ಯವಿರುವ ಮಣೆಗಳು, ಬೆಂಚುಗಳನ್ನು ದೇಣಿಗೆಯಾಗಿ ಪಡೆಯಲಾಗಿದೆ. ಮಣೆಗಳು ಬೆಂಚುಗಳು, ಕರ್ಚಿಗಳು ಅಂದಾಜು ಮೊತ್ತ- ಮಣೆಗಳು-20, ಬೆಂಚುಗಳು-20, ಕುರ್ಚಿಗಳು-20, ಗಾಡ್ರೇಜ್‌ಗಳು-4, ಹಿರಿಯ ವಿಧ್ಯಾರ್ಥಿಗಳು ಈ ಕಾರ್ಯದಲ್ಲಿ ಪಾಲ್ಗೊಳ್ಳುತ್ತಿದುದ್ದು ಹೆಮ್ಮೆಯ ವಿಚಾರವಾಗಿದೆ.

## ಅಡುಗೆ ಕೋಣೆ

ಪಾತ್ರೆಗಳ ಜೋಡಣೆಗೆ ವ್ಯವಸ್ಥಿತವಾದ ರ್‍ಯಾಕ್ಗಳು,ದಾಸ್ತಾನು ವ್ಯವಸ್ಥೆ,ನೀರಿನ ಸಂಗ್ರಹ, ಅಗ್ನಿನಂದಕ, ಮರಳುಗಳು ಅಗತ್ಯ ಇರುವೆಡೆ ವ್ಯವಸ್ಥಿತವಾಗಿ ಜೋಡಿಸಿ ಇಡಲಾಗಿದೆ.




**ಗ್ರಂಥಾಲಯ** : ಶಾಲಾ ಗ್ರಂಥಾಲಯದಲ್ಲಿ ಸುಮಾರು 500 ಪುಸ್ತಕಗಳಿದ್ದು 2014-15 ರಲ್ಲಿ “ಫಡೇ ಭಾರತ ಬಡೇ ಭಾರತ್” ಕಾರ್ಯಕ್ರಮದಡಿ “ಪುಸ್ತಕ ಜೋಳಿಗೆ” ಮೂಲಕ ಗ್ರಾಮದ ಎಲ್ಲಾ ಮನೆಗಳಿಗೆ ತೆರಳಿ ಪುಸ್ತಕಗಳನ್ನು ದೇಣಿಗೆ/ಕೊಡುಗೆಯಾಗಿ ಪಡೆಯಲಾಯಿತು. ಸುಮಾರು 7000/- ರೂ ಮೌಲ್ಯದ ಪುಸ್ತಗಳು ಶಾಲಾ ಗ್ರಂಥಾಲಯಕ್ಕೆ ಸೇರ್ಪಡೆಯಾದವು. ಗ್ರಾಮಸ್ಥರ ನೆರವು ಕಾರ್ಯಕ್ರಮದ ಯಶಸ್ವಿಗೆ ಕಾರಣವಾಯಿತು. “ಓಪನ್ ಲೈಬ್ರರಿ” ಮೂಲಕ ಮಕ್ಕಳ ಜ್ಞಾನಾರ್ಜನಗೆ ಅನುವು ಮಾಡಿಕೊಡಲಾಗಿದೆ.






## ಕುಡಿಯುವ ನೀರು ಮತ್ತು ಶೌಚಾಲಯ




ಇದೇ ಸಂದರ್ಭದಲ್ಲಿ ಗ್ರಾಮದ ಯುವಕರು 1000 ರೂಪಾಯಿ ಮೌಲ್ಯದ ವಾಟರ್ ಪಿಲ್ಟರ್ ಒಂದನ್ನು ಕೊಡುಗೆಯಾಗಿ ನೀಡಿದರು.

- 2 ವಾಟರ್ ಪಿಲ್ಟರ್ ಇದ್ದು ಶುದ್ಧ ಕುಡಿಯುವ ನೀರು ಒದಗಿಸಲಾಗುತ್ತಿದೆ.
- ಮಳೆಗಾಲದಲ್ಲಿ ಕಾಯಿಸಿ ಆರಿಸಿದ ನೀರನ್ನೇ ಕುಡಿಯಲು ನೀಡಲಾಗುತ್ತಿದೆ.
- ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯದಲ್ಲಿದ್ದು,ನಿರ್ವಹಣೆ ಶುಚಿತ್ವಕ್ಕೆ ಮಹತ್ವ ನೀಡಲಾಗುತ್ತಿದೆ.
- ವಿಶೇಷ ಹೆಣ್ಣು ಮಕ್ಕಲ ಶೌಚಾಲಯವೂ ಶಾಲೆಯಲ್ಲಿರುವುದು ವಿಶೇಷವಾಗಿದೆ.
- ದಾನಿಗಳ ನೆರವಿನಿಂದ 3 ಕೊಠಡಿಗಳಿಗೂ ಫ್ಯಾನ್ ಅಳವಡಿಸಲಾಗಿದೆ.

**ನಾವೀನ್ಯಯುತ ಬೋಧನೆ:-**







1. ಶಾಲೆಯಲ್ಲಿ ದೂರದರ್ಶನ ಇದ್ದು, 1 ರಿಂದ 5ನೇ ತರಗತಿಗೆ ಅನ್ವಯವಾಗುವ ಎಲ್ಲಾ ವಿಷಯಗಳ ಪಾಠಗಳ ಕ್ಯಾಸೆಟ್ ಖರೀದಿಸಲಾಗಿದೆ. ಆಯಾಯ ವಿಷಯಗಳ ಸದ್ಬಳಕೆಯನ್ನು ಈ ಮೂಲಕ ಮಾಡುತ್ತಿದ್ದು, ಮಕ್ಕಳ ಆನಂದದಾಯಕ ಕಲಿಕೆಗೆ ಸಹಕಾರಿಯಾಗಿದೆ.
2. ಪಾಠಕ್ಕೆ ಪೂರಕವಾಗುವಂತಹ ದೃಶ್ಯವಳಿಗಳನ್ನು ಮೊಬೈಲ್ ಬಳಕೆಯ ಮೂಲಕವೂ ತೋರಿಸಿ ಕಲಿಕೆ ದೃಢೀಕರಿಸಲಾಗುವುದು.
3. ಹಾಡು, ನೃತ್ಯಗಳ ಕಲಿಕೆಯನ್ನು ಮೊಬೈಲ್ ಮತ್ತು ಟಿ.ವಿ. ಬಳಕೆ ಮೂಲಕ ನೀಡಲಾಗುತ್ತಿದೆ.
4. ಪ್ರತೀವರ್ಷ ಶಾಲಾ ಪ್ರವಾಸ,ಹೊರಸಂಚಾರ ಕೈಗೊಳ್ಳುವ ಮೂಲಕ ಶಿಕ್ಷಣದ ಅನುಭವ-ಮಾಡಿಕಲಿ-ನೋಡಿ ತಿಳಿ ನೀಡಲಾಗುವುದು. ಉದಾ:- ಅಂಚೆ ಕಚೇರಿ, ಪೋಲೀಸ್ ಠಾಣೆ, ತರಕಾರಿ ಮಾರ್ಕೆಟ್ (ಸಂತೆ), ಮೀನು ಮಾರ್ಕೆಟ್, ಚರ್ಚ, ಮಸೀದಿ, ದೇವಾಲಯ, ಶಿಲ್ಪಕಲಾ ಕೇಂದ್ರ, ಕುಲುಮೆ, ಅಂಗವಿಕಲ ಮಕ್ಕಳ ಶಾಲೆ, ನದಿ, ಪಾರ್ಕ, ತೂಗು ಸೇತುವೆ, ಲಾಂಚ್‌ನಲ್ಲಿ ಪ್ರಯಾಣ, ಜಲಪಾತ ವೀಕ್ಷಣೆ ಸಮುದ್ರ ಹೀಗೆ ಹಲವಾಉ ಕ್ಷೇತ್ರ ಭೇಟಿ ಮಾಡಿಸಲಾಗಿದೆ.
5. ಚಲನಚಿತ್ರ ವೀಕ್ಷಣೆ:- ಮಕ್ಕಳ ಚಲನಚಿತ್ರಗಳಿಗೆ ಕರೆದೊಯ್ದು ಕಲಿಕೆಗೆ ಇಂಬು ನೀಡಲಾಗಿದೆ.
6. ಮಕ್ಕಳು ಶಾಲೆಯಲ್ಲಿ ಕಲಿಕೆ ಪಾಲ್ಗೊಂಡು ದೃಶ್ಯಾವಳಿಗಳ, ಪೋಟೋ/ವಿಡಿಯೋಗಳನ್ನು ದಾಖಲಿಸಿ, ಮೊಬೈಲ್ ಮತ್ತು ಟಿ.ವಿ.ಯಲ್ಲಿ ಹಾಕಿ-ತೋರಿಸಿ ಮಗುವಿನ ಕಲಿಕೆ ಹರ್ಷ ನೀಡಲಾಗುತ್ತಿದೆ.




**ಸಾಂಸ್ಕೃತಿಕ ಚಟುವಟಿಕೆಗಳು**













ಅಭಿನಯಗೀತೆ, ದೇಶಭಕ್ತಿಗೀತೆ, ಭಾವಗೀತೆ, ಇಂಗ್ಲೀಷ್ ರೈಮ್ಸ್, ಇತ್ಯಾದಿಗಳನ್ನು ಸಾಕಷ್ಟು ಹಾಡುವ, ಅಭಿನಯಿಸುವ ಕಲೆ ಮಕ್ಕಳಲ್ಲಿ ಕರಗತವಾಗಿದೆ.

- ಭಗವದ್ಗೀತೆಯನ್ನು ಸಾಮೂಹಿಕವಾಗಿ ಪ್ರತಿನಿತ್ಯ ಪಠಿಸುವರು.
- ರಾಷ್ಟ್ರೀಯ ಹಬ್ಬಗಳಲ್ಲಿ ನಿರರ್ಗಳವಾಗಿ ಭಾಷಣನೃತ್ಯ,ಅಭಿನಯಗೀತೆಗಳನ್ನು ಅತ್ಯುತ್ತಮವಾಗಿ ಮಾಡುವ ಮೂಲಕ ರಾಷ್ಟ್ರೀಯ ಹಬ್ಬಗಳ ಮೆರುಗು ಹೆಚ್ಚಿಸಿ ಗ್ರಾಮಸ್ಥರು,ಪೋಷಕರ,ಜನಪ್ರತಿನಿಧಿಗಳ ಮೆಚ್ಚುಗೆ ಗಳಿಸುವುದುಶಾಲೆಯ ಹೆಮ್ಮೆ.
- **ಪ್ರತಿಭಾ ಕಾರಂಜಿ;-**
  ಕಳೆದ 4 ವರ್ಷಗಳಿಂದ ದೇಶಭಕ್ತಿಗೀತೆ-2014-15 ರಲ್ಲಿ ಜಿಲ್ಲೆಯಲ್ಲಿ ಪ್ರಥಮ,ಅಭಿನಯ ಗೀತೆ ಸತತ 3 ಬಾರಿ ಜಿಲ್ಲಾ ಮಟ್ಟದಲ್ಲಿ ದ್ವಿತೀಯ & ತೃತೀಯ ಸ್ಥಾನ. 2018-19 ರಲ್ಲಿ ಇಂಗ್ಲೀಷ್ ಕಂಠಪಾಠ ತಾಲ್ಲೂಕಿನಲ್ಲಿ ಪ್ರಥಮ &ಜಿಲ್ಲೆಯಲ್ಲಿ ಉತ್ತಮವಾಗಿ ಪಾಲ್ಗೊಳ್ಳುವಿಕೆ. ಕ್ಲಸ್ಟರ್ ಮಟ್ಟದಲ್ಲಿ ಅತೀ ಹೆಚ್ಚು ಬಹುಮಾನ ಪಡೆದಹೆಗ್ಗಳಿಕೆಯನ್ನು ಪ್ರತೀ ವರ್ಷವೂ ಉಳಿಸಿಕೊಂಡು ಬರುತಿದ್ದು,. 2014-15 ರಲ್ಲಿ ಗ್ರಾಮ ಪಂಚಾಯಿತಿ ಮೇಲಿನಕುರುವಳ್ಳಿಯಿಂದ ಸಾಂಸ್ಕೃತಿಕ ಚಟುವಟಿಕೆಗಳ ಪ್ರಗತಿಗಾಗಿ 10000 ರೂಪಾಯಿ ಹಣ ನೀಡಲಾಯಿತು. ಕೋಲಾಟದ ಕೋಲು,ನೃತ್ಯಕ್ಕೆ ಉಡುಪು,ಗೆಜ್ಜೆಗಳು ,ಕಂಸಾಳ-ತಾಳಗಳು-ಈ ಹಣದಿಂದ ಪಡೆಯಲಾಯಿತು.

- ಪೋಷಕರಿಂದ-24 ಮೇಜ್‌ಗಳು,6+6=12 ಸೆಟ್ ಬಟ್ಟೆ ನೃತ್ಯಕ್ಕೆ ಪಡೆಯಲಾಯಿತು. ಅಂದಾಜು ಮೌಲ್ಯ-5000
- ರುದ್ರಾಕ್ಷಿ ಮಾಲೆ-6 ಇದಕ್ಕೆ ದಾನಿಗಳಿಂದ 1500 ರೂಪಾಯಿಗಳನ್ನು ಪಡೆಯಲಾಯಿತು.
  **ಇತರೆ:** ದಾಖಲಾತಿ ಆಂದೋಲನದ ಮೂಲಕ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ. ದಾನಿಗಳಿಂದ ಉಚಿತ ನೋಟ್‌ಬುಕ್, ಐಡಿ ಕಾರ್ಡ ಶಾಲಾ ಬ್ಯಾಗ್ ಒದಗಿದಲಾಗುತ್ತಿದೆ.

## ಹೊರ ಸಂಚಾರ







| ಕ್ರ ಸಂ | ವಿವರ | ಮೊತ್ತ |
|---|---|---|
| 1 | ಶಾಲಾ ಕಾಂಪೌಂಡ್-ಗ್ರಾಮ ಪಂಚಾಯಿತಿ ಮೇಲಿನಕುರುವಳ್ಳಿ | 600000 |
| 2 | ಹೂ ತೋಟಕ್ಕೆ ಜೆಟ್ ಅಳವಡಿಕೆ 7ಪಾತ್ ನಿರ್ಮಿಸಲು ಪೋಷಕರು & ಗ್ರಾಮಸ್ಥರಿಂದ ದೇಣಿಗೆ | 37000 |
| 3 | ಹೂದಾನಿಗಳು-30 (ಶಾಲಾ ಮಕ್ಕಳಿಂದ) | 5000 |
| 4 | ಒಂದು ಕೊಠಡಿ ಮೇಲ್ಛಾಣಿ ದುರಸ್ಥಿ-ಶಾಸಕರ ಅನುದಾನ | 200000 |
| 5 | ಮಣಿಗಳು,ಕುರ್ಚಿ,ಬೆಂಚು,ಗಾಡ್ರೇಜ್,ಪೋಟೋಗಳು (ಗ್ರಾಮಸ್ಥರು & ಪೋಷಕರುಗಳಿಂದ ) | 50000 |
| 6 | ಗ್ರಂಥಾಲಯ ಪುಸ್ತಕಗಳು -ಪುಸ್ತಕ ಜೋಳಿಗೆ ಕಾರ್ಯಕ್ರಮ | 7000 |
| 7 | ವಾಟರ್ ಫಿಲ್ಟರ್-1 | 1000 |
| 8 | ನೃತ್ಯದ ಗೆಜ್ಜೆಗಳು-14ಕಂಸಾಳೆ ತಾಳಗಳು,ಕೋಲಾಟದ ಕೋಲು,ನೃತ್ಯದ ಉಡುಪು-6 ಸೆಟ್.ಕೊಡುಗೆ ಗ್ರಾಮ ಪಂಚಾಯಿತಿ ಮೇಲಿನಕುರುವಳ್ಳಿ | 10000 |
| 9 | ವೇಲ್ ಗಳು-24,ನೃತ್ಯದ ಉಡುಪು-12 ಸೆಟ್ ರುದ್ರಾಕ್ಷಿ ಮಾಲೆ-6 | 6500 |
| 10 | ತೆರೆದ ರಂಮಂದಿರ-ಕೊಡುಗೆ ಗ್ರಾಮ ಪಂಚಾಯಿತಿ ಮೇಲಿನಕುರುವಳ್ಳಿ | 50000 |
| | ಒಟ್ಟು | 9,66,500 |